# ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯ ,

# ನಂಜನಗೂಡು

## <u>ಸಿ.ಸಿ.1950/2014</u>

ಫಿರ್ಯಾದಿಃ ರಾಜ್ಯದ ಪರವಾಗಿ ಕವಲಂದೆ ಪೋಲೀಸ್ ಠಾಣೆ,

**ವಿರುದ್ಧ**

ಆರೋಪಿಗಳುಃ
1. ಮೂರ್ತಿ , ಬಿನ್ ಸಿದ್ದಯ್ಯ , 27 ವರ್ಷ ,
2. ಕಮಲಮ್ಮ , ಕೋಂಃ ಕೆಕ್ಕೆ ಸಿದ್ದಯ್ಯ , 55 ವರ್ಷ ,
3. ಕೆಕ್ಕೆ ಸಿದ್ದಯ್ಯ , ಬಿನ್ ಲೇಟ್ ಸಿದ್ದಯ್ಯ , 70 ವರ್ಷ ,
4. ನಿಂಗರಾಜು , ಬಿನ್ ಕೆಕ್ಕೆ ಸಿದ್ದಯ್ಯ , 30 ವರ್ಷ ,
5. ರೇಖ , ಕೋಂಃ ನಿಂಗರಾಜು , 26 ವರ್ಷ ,
6. ರಂಗಸ್ವಾಮಿ , ಬಿನ್ ಲೇಟ್ ದೊಡ್ಡಯ್ಯ , 65 ವರ್ಷ ,
7. ಪುಟ್ಟ , ಬಿನ್ ಲೇಟ್ ದೊಡ್ಡಯ್ಯ ,

ಎಲ್ಲರೂ ಹನುಮನಪುರ ಗ್ರಾಮ , ನಂಜನಗೂಡು ತಾಃ ವಾಸಿಗಳು.

**ಃ ದೋಷಾರೋಪಣೆ ಃ**

ಶರ್ಮಿಳ ಎಸ್, ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಧೀಶಳಾದ ನಾನು ಆರೋಪಿಗಳಾದ ನಿಮ್ಮ ಮೇಲೆ ದೋಷಾರೋಪಿಸುವುದೇನೆಂದರೆ ಃ-

ಕವಲಂದೆ ಪೊಲೀಸ್ ಠಾಣಾ ಸರಹದ್ದು ಹನುಮನಪುರ ಗ್ರಾಮದ ಸಾಕ್ಷಿ-1 ರವರನ್ನು , 1ನೇ ಆರೋಪಿಯಾದ ನೀವು ದಿಃ 25-11-20174 ರಂದು ಹನುಮನಪುರ ಗ್ರಾಮದ ಮಂಟೆಸ್ವಾಮಿ ದೇವಸ್ಥಾನದ ಮುಂದೆ ಶಾಸ್ತ್ರೋಕ್ತವಾಗಿ ತಾಳಿಕಟ್ಟಿ ಮದುವೆಯಾಗಿದ್ದು , ಮದುವೆಯಾದ ಕೆಲವು ದಿನಗಳು ಆರೋಪಿಗಳು ಸಾಕ್ಷಿ-1 ರವರನ್ನು ಚೆನ್ನಾಗಿಯೇ ನೋಡಿಕೊಂಡಿದ್ದು , ನಂತರದ ದಿನಗಳಲ್ಲಿ ಸಣ್ಣಪುಟ್ಟ ವಿಚಾರಗಳಿಗೆ ಅಡಿಗೆ ಮಾಡಿಲ್ಲ , ಬಟ್ಟೆ ಒಗೆದಿಲ್ಲ , ನೀರು ಕಾಯಿಸಿಲ್ಲ , ಮನೆ ಕೆಲಸ ಮಾಡಿಲ್ಲ , ಎಂದು ಅವಾಚ್ಯ ಶಬ್ದಗಳಿಂದ ಬೈದು , ಕೈಯಿಂದ ಮೈಕೈಗೆ ಹೊಡೆದು , ಮಾನಸಿಕ ಹಾಗೂ ದೈಹಿಕ ಹಿಂದೆ ನೀಡುತ್ತಿದ್ದು , ದಿಃ 04.07.2014ರಂದು ಮದ್ಯಾಹ್ನ 3.00 ಗಂಟೆ ಸಮಯದಲ್ಲಿ ಸಾಕ್ಷಿ-1 ರವರು ತಮ್ಮ ಮನೆಯಲ್ಲಿ ಸ್ನಾನಕ್ಕೆ ನೀರು ಕಾಯಿಸಿಕೊಳ್ಳುತ್ತಿದ್ದಾಗ , 2ನೇ ಆರೋಪಿಯಾದ ನೀವು ಸಾಕ್ಷಿ-1

ರವರಿಗೆ ನಿಮ್ಮಪ್ಪನ ಮನೆಯಿಂದ ಸೌದೆ ತಂದು ನೀರು ಕಾಯಿಸಿಕೋ ಎಂದಾಗ , ಸಾಕ್ಷಿ-1 ರವರು ನನ್ನ ಗಂಡನ ಮನೆಂದುಲ್ಲಿ ನೀರು ಕಾಯಿಸಿಕೊಳ್ಳುತ್ತೀನಿ ನೀವು ಯಾರು ಕೇಳಲು ಎಂದಾಗ ಆರೋಪಿಗಳೆಲ್ಲರೂ ಸಮಾನ ಉದ್ದೇಶದಿಂದ ಸಾಕ್ಷಿ-1 ರವರ ಮೇಲೆ ಗಲಾಟೆ ಮಾಡಿ ಕೈಯಿಂದ ಮೈಕೈಗೆ ಹೊಡೆದು ಮಾನಸಿಕ ಹಾಗೂ ದೈಹಿಕ ಹಿಂದೆ ನೀಡಿ ಸಾಕ್ಷಿ-1ರವರನ್ನು ಮನೆಯಿಂದ ಹೊರಗೆ ಹಾಕಿದ್ದು ಆ ಕಾರಣದಿಂದ ಭಾರತೀಯ ದಂಡ ಸಂಹಿತೆ ಕಲಂ.498-ಎ ಸಹ ಕಲಂ.149 ರಡಿಯಲ್ಲಿ ದಂಡಿಸಲ್ಪಡುವ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಎಸಗಿರುತ್ತೀರಿ?

ಮೇಲ್ಕಂಡ ದೋಷಾರೋಪಣೆಗೆ ನಿಮ್ಮನ್ನು ವಿಚಾರಣೆಗೆ ಒಳಪಡಿಸಲು ಈ ಮೂಲಕ ನಾನು ನಿರ್ದೇಶಿಸಿರುತ್ತೇನೆ.

ದಿನಾಂಕ : 20.07.2015

ಸಹಿ/-
ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ
ನಂಜನಗೂಡು

## ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯ ,

## ನಂಜನಗೂಡು

## <u>ಸಿ.ಸಿ.1950/2014</u>

ಫಿರ್ಯಾದಿಃ ರಾಜ್ಯದ ಪರವಾಗಿ ಕವಲಂದೆ ಪೋಲೀಸ್ ಠಾಣೆ,

**ವಿರುದ್ಧ**

ಆರೋಪಿಗಳುಃ
1. ಮೂರ್ತಿ , ಬಿನ್ ಸಿದ್ದಯ್ಯ , 27 ವರ್ಷ ,
2. ಕಮಲಮ್ಮ , ಕೋಂಃ ಕೆಕ್ಕೆ ಸಿದ್ದಯ್ಯ , 55 ವರ್ಷ ,
3. ಕೆಕ್ಕೆ ಸಿದ್ದಯ್ಯ , ಬಿನ್ ಲೇಟ್ ಸಿದ್ದಯ್ಯ , 70 ವರ್ಷ ,
4. ನಿಂಗರಾಜು , ಬಿನ್ ಕೆಕ್ಕೆ ಸಿದ್ದಯ್ಯ , 30 ವರ್ಷ ,
5. ರೇಖ , ಕೋಂಃ ನಿಂಗರಾಜು , 26 ವರ್ಷ ,
6. ರಂಗಸ್ವಾಮಿ , ಬಿನ್ ಲೇಟ್ ದೊಡ್ಡಯ್ಯ , 65 ವರ್ಷ ,
7. ಪುಟ್ಟ , ಬಿನ್ ಲೇಟ್ ದೊಡ್ಡಯ್ಯ ,

ಎಲ್ಲರೂ ಹನುಮನಪುರ ಗ್ರಾಮ , ನಂಜನಗೂಡು ತಾಃ ವಾಸಿಗಳು.

ಃ ಆಪಾದನೆ ಃ

ಪ್ರಶ್ನೆಃ1 ಃ ಮೇಲ್ಕಂಡ ದೋಷಾರೋಪಣೆ ಓದಿ ಹೇಳಿದ್ದು ನಿನಗೆ ಅರ್ಥವಾಯಿತೆ?
ಉತ್ತರ ಃ

ಪ್ರಶ್ನೆಃ2 ಃ ನೀನು ತಪ್ಪನ್ನು ಒಪ್ಪಿಕೊಳ್ಳುವಿಯೋ ಅಥವಾ ವಿಚಾರಣೆಯಾಗಬೇಕೆ?
ಉತ್ತರ ಃ

ಮೇಲ್ಕಂಡ ದೋಷಾರೋಪಣೆಯನ್ನು ತೆರೆದ ನ್ಯಾಯಾಲಯದಲ್ಲಿ ಆರೋಪಿಗೆ ಓದಿ ಹೇಳಿ ಅವರ ಉತ್ತರವನ್ನು ಅವರು ಉತ್ತರಿಸಿದಂತೆಯೇ ಬರೆದುಕೊಂಡಿದ್ದು ಸಂಪೂರ್ಣ ಹಾಗೂ ಸರಿಯಾದ ಮಾಹಿತಿಯನ್ನೊಳಗೊಂಡಿದೆ ಎಂದು ತೆರೆದ ನ್ಯಾಯಾಲಯದಲ್ಲಿ ದಿಃ 20.07.2015 ರಂದು ದೃಢೀಕರಿಸಿದ್ದೇನೆ.

ಸಹಿ/-
ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ
ನಂಜನಗೂಡು